**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 670/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ06**

**ದಿನಾಂಕಃ 30.10.2025** **ಸಿಡಬ್ಲ್ಯೂ09**

| | |
|---|---|
| ಹೆಸರು | ಫೈರೋಜ್ ಖಾನ್ |
| ತಂದೆ ಹೆಸರು | ಮಹಮದ್ ಖಾನ್ |
| ವಯಸ್ಸು | 50 ವರ್ಷ |
| ಉದ್ಯೋಗ | ಹೆಚ್ ಸಿ |
| ವಾಸ ಸ್ಥಳ | ಮಲೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸನ್ 2022 ರಿಂದ ಇಲ್ಲಿಯವರೆಗೆ ನಾನು ಮಲೆಬೆನ್ನೂರು ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ29.11.2022 ರಂದು ಸಂಜೆ 7.30 ಗಂಟೆಗೆ ಚಾಸಾ.1ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ.222/2022ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಪ್ರ.ವ.ವರದಿಯನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

ದಿಃ30.11.2022 ರಂದು ಚಾಸಾ.1ರವರ ಮನೆಯ ಮುಂದೆ ಗಲಾಟೆ ಆದ ಸ್ಥಳಕ್ಕೆ ಬೇಟಿ ನೀಡಿ ಪಿಸಿ-421ರವರಿಂದ ಚಾಸಾ.2, 3ರವರಿಗೆ ನೋಟೀಸ್ ಜಾರಿ ಮಾಡಿಸಿ ಅವರನ್ನು ಬರಮಾಡಿಕೊಂಡು, ಸದರಿಯವರ ಸಮಕ್ಷಮ ಮಧ್ಯಾಹ್ನ 3 ರಿಂದ ಸಂಜೆ 4 ಗಂಟೆವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ಠಾಣಾ ಪಿಸಿ-397ರವರಿಂದ ಸ್ಥಳದಲ್ಲಿ ಛಾಯಾಚಿತ್ರ ಮತ್ತು ಕಚ್ಚಾನಕಾಶೆ ತೆಗೆಸಿರುತ್ತೇನೆ. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಕಚ್ಚಾನಕಾಶೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಛಾಯಾಚಿತ್ರವನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಪಂಚರಿಗೆ ನೀಡಿದ ನೋಟೀಸನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.2,3ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಚಾಸಾ.4 ರಿಂದ 6ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಆರೋಪಿತರ ವಿಚಾರಣೆಗೆ ಹಾಜರಾಗುವಂತೆ ಕಲಂ 41(ಎ) ರೀತಿ

ನೋಟೀಸ್ ಜಾರಿ ಮಾಡಿರುತ್ತೇನೆ. ನಂತರ ಚಾಸಾ.8 ರವರಿಂದ 65(ಬಿ) ಪ್ರಮಾಣ ಪತ್ರ ಪಡೆದು ಅವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ 65(ಬಿ) ಪ್ರಮಾಣ ಪತ್ರವನ್ನು ನಿಪಿ.7 ಎಂದು ಗುರುತಿಸಲಾಯಿತು.

ದಿಃ01.01.2023 ರಂದು ಚಾಸಾ.6 ರವರ ಹೇಳಿಕೆ ಪಡೆದಿರುತ್ತೇನೆ. ದಿಃ25.05.2023 ರಂದು ಕೃತ್ಯ ನಡೆದ ಸ್ಥಳದ ಮನೆಯ ದಾಖಲೆಯನ್ನು ಪಿಡಿಓ, ಹಾಲಿವಾಣ ಗ್ರಾ.ಪಂ.ರವರಿಂದ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಯದಲ್ಲಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ದೂರನ್ನು ನೀಡಲು ಚಾಸಾ.1 ರವರು ಬಂದಿದ್ದರು. ಚಾಸಾ.1 ರವರು ಗಣಕೀಕೃತ ದೂರನ್ನು ತೆಗೆದುಕೊಂಡು ಬಂದಿರುತ್ತಾರೆ. ನಿಪಿ.1 ಕ್ಕೆ ಯಾರು ಮಾಹಿತಿ ನೀಡಿದರು ಮತ್ತು ಎಲ್ಲಿ ಬೆರಳಚ್ಚು ಪಡಿಸಿದರು ಎಂದು ವಿಚಾರಿಸಿಲ್ಲ ಎಂದರೆ ಚಾಸಾ.1 ರವರು ನೀಡಿದ ದೂರನ್ನು ಪಡೆದಿರುತ್ತೇನೆ. ಚಾಸಾ.1 ರವರು ನೀಡಿರುವ ದೂರನ್ನು ನಾನು ದಾಖಲಿಸಿರುತ್ತೇನೆ ಎಂದರೆ ಸರಿ. ಚಾಸಾ.1 ರವರು ದೂರು ನೀಡಿದ ಕೂಡಲೇ ನಾವು ಪ್ರ.ವ.ವರದಿ ದಾಖಲಿಸಿರುತ್ತೇನೆ. ಇದೇ ನ್ಯಾಯಾಲಯದಲ್ಲಿ ಆರೋಪಿತರ ವರ್ಗ ಸಿಸಿ 1039/2023 ಎಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಹ ನಾನೇ ತನಿಖೆ ಮಾಡಿ ವರದಿ ನೀಡಿರುತ್ತೇನೆ ಎಂದರೆ ಸರಿ. ನಿಪಿ.1 ದೂರಿನ ಬಗ್ಗೆ ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ30.11.2022 ರಂದು ಪಂಚರಿಗೆ ನೋಟೀಸ್ ನೀಡಿರುತ್ತೇನೆ. ಪಂಚರಿಗೆ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನೋಟೀಸ್ ನೀಡಿರುತ್ತೇನೆ. ಪಂಚರಿಗೆ ಸ್ಥಳಕ್ಕೆ ಬರುವ ಪೂರ್ವದಲ್ಲಿ ನೋಟೀಸ್ ನೀಡಿರುತ್ತೇನೆ. ನಿಪಿ.6 ರಲ್ಲಿ ಪಂಚರು ಎಷ್ಟು ಗಂಟೆಗೆ ಹಾಜರಾಗಬೇಕೆಂದು ನಮೂದಿಸಿಲ್ಲ ಎಂದರೆ ಸರಿ. ಚಾಸಾ.2 ಠಾಣೆಗೆ ಆಗಾಗ ಬಂದು ಹೋಗುವ ವ್ಯಕ್ತಿ ಎಂದರೆ ಸರಿ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ವ್ಯಕ್ತಿ ಚಾಸಾ.2 ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರದಲ್ಲಿ ಕಾಣುತ್ತಿರುವ ವ್ಯಕ್ತಿ ನಿಪಿ.4 ರಲ್ಲಿರುವ ವ್ಯಕ್ತಿ ಎಂದರೆ ಸರಿಯಲ್ಲ. ಸದರಿಯವರು ಚಾಸಾ.2 ಮಹೇಶ್ವರಪ್ಪನೇ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ ಸದರಿ ಛಾಯಾಚಿತ್ರದಲ್ಲಿ ಕಾಣುತ್ತಿರುವ ಟೋಪಿ ಹಾಕಿರುವ ವ್ಯಕ್ತಿ ಮಹೇಶ್ವರಪ್ಪ ಎಂದರೆ ಸರಿಯಲ್ಲ. ಸದರಿ ಮಹೇಶ್ವರಪ್ಪ 1 ನೇ ಆರೋಪಿಯ ಕುತ್ತಿಗೆ ಹಿಸುಕಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ.2 ನಮಗೆ ಪರಿಚಯಸ್ಥನಾಗಿರುವುದರಿಂದ ನಾನು ಸ್ಥಳಕ್ಕೆ ಹೋಗದೇ ಠಾಣೆಯಲ್ಲೇ ನಿಪಿ.2 ಮತ್ತು 3 ನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಠಾಣೆಯಲ್ಲಿ ಉದ್ದೇಶಪೂರ್ವಕವಾಗಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ.

ನಿಪಿ.3 ರಲ್ಲಿ ಪಂಚರ ಸಹಿಗಳನ್ನು ಅದರ ಒಂದು ಮೂಲೆಯಲ್ಲಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ನಿಪಿ.3 ವಾಸ್ತುಸ್ಥಿತಿಗೆ ಅನುಗುಣವಾಗಿ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ಮತ್ತು ಚಾಸಾ.1 ರವರ ಮನೆಗಳು ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. ನಿಪಿ.4 ರಲ್ಲಿ ಮನೆ ಮುಂದೆ ಇರುವ ತಂತಿಬೇಲಿ ಹಾಗೂ ಟ್ರಾಕ್ಟರ್ ನಿಲ್ಲಿಸುವ ಬಗ್ಗೆ ಛಾಯಾಚಿತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ.4 ರಲ್ಲಿ ಯಾವ ದಿನಾಂಕದಂದು ತೆಗೆಯಲಾಗಿದೆ

ಎಂದು ನಮೂದು ಇಲ್ಲ ಎಂದರೆ ಸರಿ. ಸಾಕ್ಷಿದಾರರ ಮರುಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಅನುಕೂಲಕ್ಕೆ ತಕ್ಕಂತೆ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ.8 ರಲ್ಲಿ ನ್ಯಾಯಾಲಯದ ಉದ್ದೇಶಕ್ಕೆ ಎಂದು ನಮೂದು ಆಗಿಲ್ಲ ಎಂದರೆ ಸರಿ. ನಿಪಿ.8 ಪಡೆಯಲು ಗ್ರಾಮ ಪಂಚಾಯ್ತಿಗೆ ದಿಃ30.11.2022 ರಂದು ಮನವಿ ನೀಡಿದ್ದೇನೆ. ಸದರಿ ಮನವಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ.8 ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ದಿನಾಂಕ ನಮೂದಿಲ್ಲ ಎಂದರೆ ಸರಿ. ಆರೋಪಿತರಿಗೆ ನೋಟೀಸ್ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಯಾವ ಪ್ರಿಂಟರ್ ಸಹಾಯದಿಂದ ಅದನ್ನು ಪ್ರಿಂಟ್ ತೆಗೆದಿರುತ್ತೇವೆ ಎಂದು ನಮೂದಿಸಿಲ್ಲ ಎಂದರೆ ಸರಿ. ಗಲಾಟೆ ವಿಚಾರವಾಗಿ ಆರೋಪಿತರು ನನಗೆ ನೀಡಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಆರೋಪಿತರು ನನಗೆ ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಚಾಸಾ.2 ರವರೊಂದಿಗೆ ಷರೀಕಾಗಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ